ಮಣಿದು ಸೋತಿದ್ದ ಅವಳಪ್ಪ ಅಮ್ಮಂದಿರೂ ಅಷ್ಟರಲ್ಲಿ ಹೈರಾಣಾಗಿದ್ದರು. ಈಗ ಮನೆಗೆ ಬಂದ ಮಗಳು ಮತ್ತು ಮೊಮ್ಮಗುವನ್ನು ನೋಡಿಕೊಳ್ಳುವ ಸಲುವಾಗಿ ಉಳಿದಿದ್ದ ತಮ್ಮ ಮನೆಯನ್ನೇ ಅಡವಿಡಬೇಕಾಯ್ತು. ಅದೂ ಮಗಳಿಗೆ ಹೇಳದೆಯೇ.

ಅಪ್ಪನ ಮನೆಯಲ್ಲಿ ದಿನ ಕಳೆಯುತ್ತಿದ್ದಾಗಲೇ ಅಲ್ಲಿ ಗಂಡ ಸತ್ತ ಸುದ್ದಿ ಬಂದಿತ್ತು. ಹೆಸರಿಲ್ಲದ ಕಾಯಿಲೆಗೆ ತುತ್ತಾಗಿದ್ದ ಅವ ಸಾಯುವಾಗ ಹತ್ತಿರದಲ್ಲಿ ಯಾರೂ ಇರಲಿಲ್ಲವಂತೆ. ತೆರೆದ ಬಾಗಿಲಿನಿಂದ ನಾರುತ್ತಿದ್ದ ಶವದ ವಾಸನೆಯನ್ನು ತಡೆಯಲಾರದ ಮಂದಿ ಊರ ಮುನಿಸಿಪಾಲಿಟಿಯವರಿಗೆ ದೂರು ಕೊಟ್ಟು ಅವರಿಂದಲೇ ಅನಾಥ ಶವಕ್ಕೆ ಮಾಡುವಂತೆ ಸಂಸ್ಕಾರ ಮಾಡಿಸಿದರಂತೆ. ಕೇಳಿದ ಈಕೆಯ ಕಣ್ಣಿನಲ್ಲಿ ಹನಿ ನೀರೂ ಬಂದಿರಲಿಲ್ಲ. ಆಕೆಯ ಕಣ್ಣಲ್ಲಿ ನೀರು ಬಂದಿದ್ದರೆ ಮತ್ತೆರಡು ವರ್ಷಕ್ಕೆ ತನ್ನ ಅಪ್ಪ ಅಮ್ಮನೂ ಸತ್ತು ಮುಂದೆ ತನಗೆ ಇರಲಿಕ್ಕೂ ಒಂದು ನೆಲೆಯಿಲ್ಲ ಎಂದಾದಾಗಲೇ.

ಮುಂದೆ ಕಷ್ಟ ಪಟ್ಟಿದ್ದಳು. ಅತ್ತಿದ್ದಳು. ಕನಿಕರಿಸುವವರೆಲ್ಲ ಬದುಕಿಗೆ ಆದಾರೆಯೇ. ಪ್ರತಿಯೊಬ್ಬರಿಗೂ ಅವರವರ ಬದುಕೇ ದೊಡ್ಡದು. ಮಗುವನ್ನು ಕಟ್ಟಿಕೊಂಡು ಏಗಿದಳು. ಎರಡು ಹೊಟ್ಟೆ ತುಂಬಿಸಲು ಕೂಲಿ ಕೆಲಸ ಮಾಡಿದಳು. ಹೊಲಿಗೆಯವರಲ್ಲಿ ಬಟ್ಟೆ ಬೇಡಿ ಕಾಡಿ ತಂದು ಗುಂಡಿ ಹೊಲಿದು ಕೊಟ್ಟಳು. ನಾಳಿನ ಊಟಕ್ಕೆ ಗತಿಯಿಲ್ಲವೆಂದಾದಾಗ ಒಂದೆರಡು ಕಡೆ ಮನೆಕೆಲಸವನ್ನೂ ಮಾಡಿದಳು. ಕೊನೆಗೊಮ್ಮೆ ಊರಿನ ಬಟ್ಟೆಯಂಗಡಿಯಲ್ಲಿ ಸೇಲ್ಸ್ ಗರ್ಲ್ ಆಗಿ ಸೇರಿಕೊಂಡಳು. ಹಾಗೆ ಸೇರಿ ತಿಂಗಳು ಕಳೆಯುವುದರೊಳಗೆ ಈಕೆ ಪದವೀಧರೆಯೆಂದು ತಿಳಿದ ಮಾಲೀಕ ಅಂಗಡಿಯಲ್ಲಿ ಲೆಕ್ಕ ಪತ್ರ ಬರೆಯುವ ಕೆಲಸವನ್ನು ಕೊಟ್ಟ. ಅದೂ ಕೆಲಸಕ್ಕೆ ಬಂದ ದಿನ ಮಾತ್ರ ಸಂಬಳ! ಅಂಗಡಿಯ ಒಳಗಡೆ ಕೋಣೆಯೊಂದರಲ್ಲಿ ಕುಳಿತು ಮಾಡುವ ಕೆಲಸ.

ಈಗ ಒಮ್ಮೊಮ್ಮೆ ಕೃಷ್ಣನ ನೆನಪು ಬರುತ್ತದೆ. ಒಂದೇ ಕೋಣೆಯ ಆ ವಠಾರದ ಮನೆಯಲ್ಲಿ ರಾತ್ರಿ ಹೊತ್ತು ಮಗನಿಗೆ ಪಾಠ ಹೇಳಿಕೊಡುವಾಗ ಆ ನೆನಪು ಮರುಕಳಿಸುತ್ತದೆ. ಒಂಬತ್ತು ಗಂಟೆಗೆ ಮುಲಾಜಿಲ್ಲದೇ ವಿದ್ಯುತ್ ಆಫ್ ಮಾಡುತ್ತಾಳೆ ಆ ವಠಾರದ ಯಜಮಾನಿ. ಅಷ್ಟರೊಳಗೇ ಎಲ್ಲ ಕೆಲಸ ಮುಗಿಸಬೇಕು. ಕೆಲಸ ಮುಗಿಸಿ ನಡೆದುಕೊಂಡೇ ಬರುವ ಅವಳು ಆ ಗೂಡನ್ನು ಸೇರುವುದೇ ಎಂಟು ಗಂಟೆಗೆ. ಅಡಿಗೆ ಮಾಡಬೇಕು. ಅಲ್ಲಿಯವರೆಗೆ ಬೀದಿ ದೀಪದ ಬೆಳಕಿನಲ್ಲಿ ಆಟವಾಡುತ್ತಿದ್ದ ಎರಡನೇ ತರಗತಿಯಲ್ಲಿ ಕಲಿಯುತ್ತಿದ್ದ ಮಗ ಅಷ್ಟರಲ್ಲಿ ಒಳ ಬಂದು ಕುಳಿತವನ ಹೋಮ್‌ವರ್ಕ್ ಮಾಡಿಸಬೇಕು. ಬೇಯುತ್ತಿರುವ ಅನ್ನವನ್ನು ನೋಡುತ್ತಿರುವಾಗ ನಾಳಿನ ಅನ್ನಕ್ಕೆ ಆ ಕೆಟ್ಟ ಕಣ್ಣಿನ ಅದೇ ಸಾಹುಕಾರನ ಹತ್ತಿರ ಪುನಃ ಕೈ ಒಡ್ಡಬೇಕಲ್ಲ ಎನ್ನುವುದು ಮನಸ್ಸಿಗೆ ಬಂದಾಗಲೆಲ್ಲ ಆಕೆಗೆ ಕೃಷ್ಣನದ್ದೇ ನೆನಪು. ಅವನು ಡಾಕ್ಟರನಾಗಿದ್ದು ತಿಳಿದಿತ್ತು. ಜನರ ಸೇವೆಗೇ ತನ್ನನ್ನು ಮುಡಿಪಾಗಿಟ್ಟುಕೊಂಡ ಅವ ಮದುವೆಯನ್ನೂ ಮಾಡಿಕೊಳ್ಳದೆ ಎಲ್ಲಿಯೋ ಕೆಲಸ ಮಾಡುತ್ತಿದ್ದಾನೆಂದೂ ಹೇಳುತ್ತಿದ್ದರು ಜನ.

ಶಂಕರನ ಬಣ್ಣದ ಬೆರಗಿಗೆ ಮನಸೋತು ಹೇಗೆ ಮೋಸಹೋದೆನಲ್ಲ ಎನ್ನಿಸುತ್ತದೆ ಆಕೆಗೆ. ಎಲ್ಲ ಮುಗಿಯಿತೆಂದೂ ಅನಿಸುತ್ತದೆ. ಆದರೆ ಡಿಗ್ರಿ ಮುಗಿದಾಕ್ಷಣ ಆತುರ ಬಿದ್ದು ಮದುವೆಯಾಗಿ ಅಷ್ಟೇ ಆತುರದಲ್ಲಿ ಮಗುವಿನ ತಾಯಿಯೂ ಆದ ತನ್ನದೇ ವಯಸ್ಸಿನ ಹೆಣ್ಣು ಮಕ್ಕಳು ಇನ್ನೂ ಮದುವೆಯಾಗದಿರುವುದೂ ಗೊತ್ತಿದೆ ಆಕೆಗೆ. ಬಟ್ಟೆ ಅಂಗಡಿಯ ಒಳ